ಅವನು ಏನೂ ಮಾತನಾಡಲಿಲ್ಲ. ನೆಲಕ್ಕೆ ಅಪ್ಪಳಿಸಿದ ಹೂದಾನಿ ಮತ್ತು ತನ್ನ ಭಯದಿಂದಾಗಿ ಹನ್ನಾ ಬಚಾವಾದಳು. ಅವಳು ತನ್ನನ್ನು ಬೆತ್ತಲೆಗೊಳಿಸುವ ಮೊದಲೇ ಅವಳ ಕಪಾಟಿನಲ್ಲಿ ಅಡಗಿಸಿದ್ದ ಪುಡಿಯ ಪೊಟ್ಟಣವನ್ನು ತೆಗೆದುಬಿಡಬೇಕು ಹಾಗೂ ತಾನು ಮೇಜಿನ ಮೇಲಿನ ಆ ಔಷಧಿಯನ್ನು ಕುಡಿಯಬಾರದು...

ನಿಜಕ್ಕೂ ಅವನ ಆರೋಗ್ಯ ಕೆಟ್ಟಿತ್ತು. ತಾನು ಹೊರಗೆ ಹೋಗಲೇಬಾರದಿತ್ತೆಂದು ಅವನಿಗೆ ಖಾತ್ರಿಯಾಯಿತು. ಅಷ್ಟರಲ್ಲಿ ಡಾಕ್ಟರ್ ಬಂದಿದ್ದರು. ಬಗ್ಗಿ ಅವನ ಎದೆಯ ಮೇಲೆ ಏನೇನೋ ಮಾಡುತ್ತಿದ್ದರು. ಅದು ತಣ್ಣಗಾಗುತ್ತಿತ್ತು.

"ಡಾಕ್ಟರ್... ಡಾಕ್ಟರ್." ಅವನು ಕಷ್ಟಪಟ್ಟು ಮಾತನಾಡತೊಡಗಿದ. "ಹನ್ನಾ... ಬಿಳಿ ಪುಡಿ... ಅದು... ಅದು..."

ಅವನಿಗೆ ಬಹಳ ಹೊತ್ತಿನ ನಂತರ ನೆನಪಿಗೆ ಬಂತು. ಮತ್ತೆಷ್ಟೋ ನೆನಪುಗಳು ಒಂದೊಂದಾಗಿ ಅವನ ಮುಂದೆ ಸಾಗತೊಡಗಿದವು. ಮಧ್ಯೆ, ಅವನ ದೃಷ್ಟಿ ಮಂಚದ ಸುತ್ತ ತಿರುಗಿದಾಗ ಗಂಭೀರ ಮುಖವನ್ನು ಹೊತ್ತು ಆತಂಕದಿಂದ ತನ್ನನ್ನೇ ಗಮನಿಸುತ್ತಾ ಕಲ್ಲಾಗಿ ನಿಂತಿದ್ದ ಡಾಕ್ಟರ್, ನರ್ಸ್ ಮತ್ತು ಹನ್ನಾ ಕಂಡರು.

ಈಗಂತೂ ತಾನು ಸಾಯುತ್ತಿರುವುದು ಅವನಿಗೆ ಖಾತ್ರಿಯಾಗತೊಡಗಿತು. ಅವನಿಗೆ ಹನ್ನಾಳ ಮೇಲೆ ಕಿಂಚಿತ್ತೂ ತಿರಸ್ಕಾರ ಮೂಡಲಿಲ್ಲ.

### ಡಬ್ಲ್ಯು.ಡಬ್ಲ್ಯು. ಜೇಕಬ್ಸ್

ವಿಲಿಯಂ ವೈಮಾರ್ಕ್ ಜೇಕಬ್ಸ್ (1883–1943), ಇಂಗ್ಲೆಂಡಿನ ವ್ಯಾಪಿಂಗ್ ಎಂಬಲ್ಲಿ ಜನಿಸಿದ. ಅವನು ಹನ್ನೆರಡು ಸಣ್ಣಕತೆಗಳ ಸಂಗ್ರಹ ಮತ್ತು ಕಾದಂಬರಿಗಳನ್ನು ಬರೆದಿದ್ದಾನೆ. ಜೇಕಬ್ಸ್ ತನ್ನ ಹಾಸ್ಯ ಕತೆಗಳಿಂದ, ನಾವಿಕರ ಕತೆಗಳಿಂದ ಜನಪ್ರಿಯ. 'Monkey's Paw' ಎಂಬ ಅವನ ಕುತೂಹಲಭರಿತ ಕತೆ ಎಲ್ಲಡೆ ಪ್ರಸಿದ್ಧವಾಗಿದೆ. ಬರೆಯುವುದು ಅವನ ಹವ್ಯಾಸವಾಗಿತ್ತಷ್ಟೆ. ಸಿವಿಲ್ ಸರ್ವಿಸ್ ಪಾಸುಮಾಡಿದ್ದ ಜೇಕಬ್ ಪೋಸ್ಟ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ.

### ಜೆ.ವಿ. ಕಾರ್ಲೊ

ಅನುವಾದಕರು ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಹಳ್ಳಿಗೆ ಸೇರಿದ್ದ ಅವರನ್ನು ಕಲಾವಿದ ಗೆಳೆಯರಾದ ಕೆ.ಟಿ. ಶಿವಪ್ರಸಾದರು ತಾವು ವಿನ್ಯಾಸ ಮಾಡಲು ಶುರುಮಾಡಿದ ಮನೆಗಳನ್ನು ಕಟ್ಟುವ ಕೆಲಸಕ್ಕೆ ಹಚ್ಚಿದರು. ಅದನ್ನೇ ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಈವರೆಗೆ ಕೆಲವು ಇಂಗ್ಲಿಷ್ ಸಣ್ಣ ಕತೆಗಳನ್ನು ಅನುವಾದಿಸಿದ್ದಾರೆ. ಸುಮಾರು 30 ಸಣ್ಣ ಕತೆಗಳು ಪತ್ರಿಕೆ, ಅಂತರ್ಜಾಲಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 80ಕ್ಕೂ ಹೆಚ್ಚು ಸಣ್ಣ ಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.